ಮಾವ ಮಗುವಿನ ಜೊತೆ ಅಂಗಳದಲ್ಲಿ ಇದ್ದರು. ಪ್ರಶ್ನಾ ಬಟ್ಟೆ ಒಣಗಿಸುತ್ತಾ ಇದ್ದಳು. ನನ್ನನ್ನು ನೋಡಿ ನಕ್ಕಳು. 'ಬಾ... ಕಾಫಿ ಕುಡೀತೀಯ?' ಕೇಳಿದಳು.

'ನಾನು ನಿನ್ನ ಜೊತೆ ಸ್ವಲ್ಪ ಮಾತಾಡಬೇಕು' ಅಂದೆ. ದನಿ ಸ್ವಲ್ಪ ಬಿಗುವಾಗಿತ್ತು.

'ನಿನ್ನೆ ಎಲ್ಲಾ ಸಮುದ್ರ ತೀರದಲ್ಲಿ ಐದು ಆರು ಗಂಟೆ ಕುಳಿತಿದ್ದಿರಲ್ಲ... ಮೀನು ಹಿಡೀತಿದ್ರಾ... ಇಬ್ಬರೂ?' ಅವಳ ಮಾವ ತಮಾಷೆ ಮಾಡಿದರು.

'ಇಲ್ಲ...' ತಡವರಿಸಿದೆ. 'ಅದು... ಬಹಳ ವರ್ಷ ಗ್ಯಾಪ್ ಬಂದು ಬಿಟ್ಟಿತಲ್ಲ... ಏನೂ ಮಾತಾಡಲು ಆಗಲೇ ಇಲ್ಲ...'

'ಹೌದು ಹೌದು... ಅದು ಸಹಜವೇ... ಪ್ರಶ್ನಾ ನಾನು ಅಡುಗೆ ಕೆಲಸ ನೋಡ್ತೀನಿ. ನೀವಿಬ್ಬರೂ ಬೇಕಾದ್ರೆ ಇಲ್ಲೇ ಕುಳಿತು ಮಾತಾಡ್ತಿರಿ' ಅಂದರು ಅತ್ತೆ.

ಪ್ರಶ್ನಾ ಸುಮ್ಮನೆ ನನ್ನ ಕಡೆ ನೋಡಿದಳು. 'ನೀನು ತಪ್ಪು ಮಾಡಿದೆ' ಎಂಬ ಸಂದೇಶ ಅಲ್ಲಿ ರವಾನೆ ಆಯಿತು.

ಆದರೂ ನಾನು ಬಿಡಲಿಲ್ಲ 'ಬರ್ತೀಯಾ ಪ್ರಶ್ನಾ. ಹಾಗೇ ಹೊರಗೆ ಹೋಗೋಣ' ಅಂದೆ.

'ಸಮುದ್ರ ತೀರದಲ್ಲಿ ಬಿಸಿಲಿರುತ್ತೆ... ಬೇಕಾದ್ರೆ ತೋಟದ ಕಡೆ ಹೋಗಿ ಬನ್ನಿ' ಅಂದರು ಮಾವ.

'ಬೇಡ. ಸಮುದ್ರ ತೀರದಲ್ಲಿ ಗುಡಿಸಿಲುಗಳ ನೆರಳು ಹರಡಿರುತ್ತೆ. ನನಗೆ ಅವಳ ಹತ್ತಿರ ಮಾತನಾಡಲೇ ಬೇಕಿದೆ' ಹಟ ಹಿಡಿದವನಂತೆ ಹೇಳಿದೆ.

ಅವಳ ಅತ್ತೆ ಮಾವನಿಗೆ ಸಹನೆ ಆಗಲಿಲ್ಲವೆನಿಸುತ್ತೆ. ಅವರು ಮಾತನಾಡಲಿಲ್ಲ. ಪ್ರಶ್ನಾ ತಾನೇ ಹೇಳಿದಳು 'ಬೇಡ ಬಾ. ಮನೇಲೆ ತಂಪಾಗಿ ಕುಳಿತು ಮಾತಾಡೋಣ. ...ಒಂದೆರಡು ಎಳನೀರೂ ಹೊಟ್ಟೆಗೆ ಹೋಗುತ್ತೆ... ಏನಂತೀಯ!' ಮಾತು ತಿಳಿಗೊಳಿಸಲು ಯತ್ನಿಸಿದಳು.

ನನಗೆ ಸಿಟ್ಟು ಬಂತು. 'ನಾನು ಬರ್ತೀನಿ' ಎಂದು ಎದ್ದು ಹೊರಟು ಬಿಟ್ಟೆ. ತೀರ ಬೈಕ್ ತಿರುಗಿಸುವಾಗ ಅವಳ ಕಡೆ ನೋಡಿದೆ. ಒಂದು ಕೈಯಲ್ಲಿ ಬಟ್ಟೆಹರಡುವ ಹಗ್ಗ ಹಿಡಿದು, ಒಂದು ಕಾಲು ಮುಂದಿಟ್ಟು ಪ್ರಶ್ನಾರ್ಥಕ ಭಂಗಿಯಲ್ಲಿ ನಿಂತಿದ್ದಳು.

ಮನೆಯಲ್ಲೂ ತುಂಬಾ ವ್ಯಗ್ರನಾಗೇ ವರ್ತಿಸಿದೆ. ಅಮ್ಮನ ಬಳಿ ಕೂಗಾಡಿದೆ. 'ಅವಳಿಗೇನೋ ಆಗಿದೆ. ಶ್ರೀಮಂತರ ಮನೇಲಿ ಕೈಗೊಂದು ಆಳು, ಕಾಲಿಗೊಂದು ಆಳು ಎಂಬಂತೆ ಸುಖವಾಗೇ ಇದ್ದಾಳಲ್ಲ!' ಅಂದರು ಅಮ್ಮ. 'ನಿಮಗೆಲ್ಲ ಎಲ್ಲಿ ಅರ್ಥ ಆಗುತ್ತೆ. ಹಣದಲ್ಲಿ ಸ್ವಭಾವ ಮರೆ ಆಗುತ್ತೆ ಅಂದರೆ ಏನು ಅರ್ಥ? ಅವಳನ್ನ ಅವಳು ಕೊಂದುಕೊಳ್ತಿದ್ದಾಳೆ ಅಂತ. ಯಾಕೆ ಹೀಗೆ? ಏನಾಗಿದೆ? ನಾಳೆ ಬೇರೊಂದು ಥರ ಆಗಿಬಿಟ್ಟರೆ ಅವಳನ್ನ ಸೈಕಿಯಾಟ್ರಿಸ್ಟ್‌ಗೆ ತೋರಿಸಬೇಕಾಗುತ್ತೆ...' ಅಂತೆಲ್ಲ ಹಾರಾಡಿದೆ. ಶ್ರದ್ಧಾ ಅತೀವ ಮೌನ ವಹಿಸಿಬಿಟ್ಟಿದ್ದಳು.

ಸಂಜೆ ಅವಳಿಗೆ ಹೇಳಿದೆ 'ನೀನು ತಪ್ಪು ತಿಳಿಬೇಡ ಕಣೆ. ನಿಜವಾಗಿ ನನಗೆ ಪ್ರಶ್ನಾ ಬಗ್ಗೆ ಕಾಳಜಿ ಆಗ್ತಿದೆ. ಅವಳು ಮೊದಲಿನ ತರಹ ಇಲ್ಲ.'

'ಹೆಣ್ಣು ಮಕ್ಕಳು ಹಾಗೆಲ್ಲ ಬದಲಾವಣೆ ಆಗೋದು ಸಹಜ ರೀ. ನಿಮಗೆ ಯಾಕೆ ಅರ್ಥ ಆಗಲ್ಲ.' ಅವಳು ಸಮಾಧಾನದಿಂದಲೇ ಹೇಳಿದಳು.

'ಆದರೆ ಇದು ಆರೋಗ್ಯಕರ ಬದಲಾವಣೆ ಅಲ್ಲ. ...ಅವಳೊಂದು ತರಹ ನಿರ್ಲಿಪ್ತಳ ತರಹ, ವಿರಕ್ತಳ ತರಹ ಇದ್ದಾಳೆ. ಈ ಚಿಕ್ಕ ವಯಸ್ಸಿಗೆ ಅದು ಸರಿ ಅಲ್ಲ...' ಆತಂಕ ತೋಡಿಕೊಂಡೆ.

'ಇರಬಹುದು. ಆದರೆ ನೀವು ಅಲ್ಲಿ ಮೂಗು ತೂರಿಸಿದರೆ ಅವಳಿಗೇ ತೊಂದರೆ ಆಗುವುದು.